ಹರಿಜನ ಹಾಗೂ ಗಿರಿಜನ ಅರಣ್ಯ ಕೆಲಸಗಾರರ ಉತ್ಪಾದನೆ ಹಾಗೂ ಮಾರಾಟ ಸಹಕಾರ ಸಂಘ

೧. ಶ್ರೀ ಜಿ. ರಾಜೂಗೌಡ (ಹನೂರು).— ಮಾನ್ಯ ಕೃಷಿ, ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹರಿಜನ ಮತ್ತು ಗಿರಿಜನರ ಅರಣ್ಯ ಕೆಲಸಗಾರರ ಉತ್ಪನ್ನ ಮತ್ತು ಮಾರಾಟ ಸಹಕಾರ ಸಂಘಕ್ಕೆ ಯಾವ ಯಾವ ಅರಣ್ಯ ವಲಯಗಳಲ್ಲಿ ನಾನಾ ಬಗೆಯ ಮರಗಳಿಂದ ಹಾಲು ಮಡ್ಡಿಯನ್ನು ತೆಗೆಯುವ ಹಕ್ಕನ್ನು ನೀಡಲಾಗುತ್ತಿತ್ತು.

ಆ) ಈ ಸಹಕಾರ ಸಂಘದಿಂದ ಖಾಸಗಿ ಉದ್ಯಮಗಳು ಲಕ್ಷಾಂತರ ರೂಪಾಯಿ ಲಾಭ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದರೆ ಈ ಬಗ್ಗೆ ಸರ್ಕಾರದ ನಿಲುವು ಏನು ?

ಶ್ರೀ ಕೆ. ಹೆಚ್. ರಂಗನಾಥ್ (ಕೃಷಿ, ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು).—

ಅ) ಕುಂದಾಪುರ ವಿಭಾಗದ ಬೈಂದೂರು, ಕುಂದಾಪುರ ಮತ್ತು ಶಂಕರನಾರಾಯಣ ವಲಯಗಳಿಂದ.

ಆ) ಕುಂದಾಪುರ ತಾಲ್ಲೂಕಿನ ಶ್ರೀ ಮಂಜಯ್ಯ ಶೆಟ್ಟಿ ಎನ್ನುವವರು ದಕ್ಷಿಣ ಕನ್ನಡ ಹರಿಜನ ಮತ್ತು ಗಿರಿಜನ ಅರಣ್ಯ ಕೆಲಸಗಾರರ ಉತ್ಪನ್ನ ಮತ್ತು ಮಾರಾಟ ಸಹಕಾರ ಸಂಘಕ್ಕೆ ಹಾಲುಮಡ್ಡಿ ಸಂಗ್ರಹಿಸುವ ಗುತ್ತಿಗೆ ನೀಡಿರುವ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ ೧೯೩೨/೯೦ ನ್ನು ದಾಖಲು ಮಾಡಿರುತ್ತಾರೆ. ಸದರಿ ಅರ್ಜಿಯಲ್ಲಿ ಕೆಲವೇ ಖಾಸಗಿ ವ್ಯಕ್ತಿಗಳು ದುರ್ಲಾಭ ಪಡೆಯುತ್ತಿದ್ದಾರೆಂದು ಆಪಾದಿಸಲಾಗಿದೆ.

ಇ) ಈ ಪ್ರಕರಣವು ಉಚ್ಚ ನ್ಯಾಯಾಲಯದ ಮುಂದೆ ಇರುವುದರಿಂದ ನ್ಯಾಯಾತೀತವಾಗಿದೆ.

ಶ್ರೀ ಜಿ. ರಾಜೂಗೌಡ.— ಸನ್ಮಾನ್ಯ ಅಧ್ಯಕ್ಷರೆ, ಯಾವ ಉದ್ದೇಶಕ್ಕಾಗಿ ಮಂಜಯ್ಯ ಶೆಟ್ಟಿರವರು ಉಚ್ಚನ್ಯಾಯಾಲಯದ ಮೊರೆ ಹೊಕ್ಕರು, ಮೇಲುನೋಟಕ್ಕೆ ಸಹಕಾರ ಸಂಘದವರು ತಪ್ಪು ಎಸಗಿದ್ದಾರೆ ಎಂದು ತಿಳಿದಮೇಲೆ, ಆ ಸಹಕಾರ ಸಂಘದ ಆಡಳಿತವನ್ನು ರದ್ದು ಪಡಿಸಲು ಏನಾದರೂ ಕ್ರಮ ಕೈಗೊಂಡಿದ್ದೀರಾ ?

ಶ್ರೀ ಕೆ. ಹೆಚ್. ರಂಗನಾಥ್.— ಅದು ಬೇರೆ ಇಲಾಖೆಗೆ ಸಂಬಂಧಪಟ್ಟ ಕೆಲಸ. ಸಹಕಾರಸಂಘ ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದರೆ ಅದರ ಬಗ್ಗೆಕ್ರಮ ತೆಗೆದುಕೊಳ್ಳುವುದು ಸಹಕಾರ ಇಲಾಖೆಯ ವ್ಯಾಪ್ತಿಗೆ ಬರುತ್ತದೆ.

ಶ್ರೀ ಜಿ. ರಾಜೂಗೌಡ.— ಯಾವ ಉದ್ದೇಶಕ್ಕಾಗಿ ಸಹಕಾರ ಸಂಘ ಸ್ಥಾಪನೆಯಾಯಿತೋ ಆ ಉದ್ದೇಶ ನೆರವೇರದೇ ಇದ್ದಾಗ, ಅದು ಸರ್ಕಾರದ ಗಮನಕ್ಕೆ ಬಂದಾಗ ತಾವು ಏನು ಕ್ರಮ ಕೈಗೊಳ್ಳುತ್ತೀರಿ. ಇಷ್ಟು ವರ್ಷಗಳಿಂದ ಸಹಕಾರ ಸಂಘ ಗುತ್ತಿಗೆ ಪಡೆದು ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡಿದೆ ಎನ್ನುವುದರ ಬಗ್ಗೆ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದೀರಿ ?

ಶ್ರೀ ಕೆ. ಹೆಚ್. ರಂಗನಾಥ್.— ಅಲ್ಲಿ ಕೆಲವು ಅವ್ಯವಹಾರಗಳು ನಡೆಯುತ್ತಿವೆ ಎನ್ನುವುದು ಕಂಡುಬಂದಿದೆ. ಸಭೆಗೆ ವಿವರ ಹೇಳುವುದಾದರೆ, ೧೯೮೧—೮೪ರಲ್ಲಿ ಒಂದು ಲಕ್ಷ ೮೪ ಸಾವಿರ ರೂಪಾಯಿ ೧೯೮೪—೮೭ರಲ್ಲಿ ಒಂದು ಲಕ್ಷ ೭೭ ಸಾವಿರ ೯೨೫ ರೂಪಾಯಿಗಳು, ೧೯೮೭—೯೦ರಲ್ಲಿ ೨ ಲಕ್ಷ ೭೫ ಸಾವಿರ ರೂಪಾಯಿಗಳನ್ನು ಅವರಿಗೆ ಕೊಟ್ಟು ಆಗಿತ್ತು. ಆದರೆ ಅವ್ಯವಹಾರ ನಡೆಯುತ್ತಾ ಇದೆ. ಯಾರ ಅನುಕೂಲಕ್ಕಾಗಿ ಈ ಸಹಕಾರ ಸಂಘ ಕೆಲಸ ಮಾಡಬೇಕಾಗಿತ್ತೊ ಅದನ್ನು ಮಾಡುತ್ತಾ ಇಲ್ಲ ಎನ್ನುವ ಆಪಾದನೆ ಬಂದಿದೆ. ಆದರೆ ಅದರ ಬಗ್ಗೆ ತೀರ್ಮಾನ ಕ್ರಮ ತೆಗೆದುಕೊಳ್ಳುವುದು ಅರಣ್ಯ ಇಲಾಖೆಯಲ್ಲ, ಸಹಕಾರ ಇಲಾಖೆ.

ಶ್ರೀ ಜಿ. ರಾಜೂಗೌಡ.— ಹಾಲುಮಡ್ಡಿಯನ್ನು ಹೆಚ್ಚಾಗಿ ಸಂಗ್ರಹ ಮಾಡುವುದರಿಂದ ಆ ಮರಗಳು ಒಣಗಿ ಹೋಗುತ್ತಿವೆ ಎನ್ನುವುದು ಮಾನ್ಯ ಅರಣ್ಯ ಸಚಿವರ ಗಮನಕ್ಕೆ ಬಂದಿದೆಯೇ ? ಮತ್ತು ಅವ್ಯವಹಾರದ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ?

ಶ್ರೀ ಕೆ. ಹೆಚ್. ರಂಗನಾಥ್.— ಆಪಾದನೆ ಬಂದು ವಿಚಾರ ಮಾಡಿದಾಗಲೂ ಸರ್ಕಾರ ಇಷ್ಟು ಹಣವನ್ನು ಕೊಡಬೇಕು ಎಂದು ತೀರ್ಮಾನ ತೆಗೆದುಕೊಂಡಿದೆ, ಅನಿವಾರ್ಯವಾಗಿ ಇಲಾಖೆಯವರು ಕೊಟ್ಟಿದ್ದಾರೆ.

ಶ್ರೀ ಜಿ. ಎಸ್. ಆಚಾರ್.— ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿರುವ ಈ ಸಂಸ್ಥೆಯಲ್ಲಿ ಅವ್ಯವಹಾರ ನಡೆಯುತ್ತಾ ಇರುವುದರಿಂದ ನಾನು ಉಪಪ್ರಶ್ನೆ ಕೇಳಲಿಕ್ಕೆ ಬಯಸುತ್ತೇನೆ. ಈ ಸಹಕಾರ ಸಂಘ ಲಾಭದಲ್ಲಿ ನಡೆಯುವ ಒಳ್ಳೆಯ ಸಂಘವಾಗಿತ್ತು. ಈ ಸಂಘದಲ್ಲಿ ಯಾರು ಸದಸ್ಯರಾಗಿದ್ದಾರೊ ಹರಿಜನ-ಗಿರಿಜನರು ಅವರು ಯಾರು ಹೈಕೋರ್ಟಿಗೆ ಹೋಗಿದ್ದಾರೋ ಅವರ ಭದ್ರವಾಪ್ಟಿಯಲ್ಲಿದ್ದ ಕಾಲವಿತ್ತು. ಅವರ ಹಿತಾಸಕ್ತಿಗೆ ವಿರುದ್ಧವಾಗಿ ಸ್ವತಂತ್ರವಾಗಿ ವ್ಯವಹಾರ ಮಾಡಿದ್ದರಿಂದ ಹೈಕೋರ್ಟಿಗೆ ಹೋಗಿದೆ ಎನ್ನುವ ವಿಚಾರವನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತಾ ಇದ್ದೇನೆ ಹೈಕೋರ್ಟಿನಲ್ಲಿ ವ್ಯವಹಾರ ಪುನಾರುವರಿಸಲಿಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕು. ಸಹಕಾರ ಸಂಘದ ಸಾಧಕಬಾಧಕಗಳನ್ನು, ವ್ಯವಹಾರವನ್ನು ಮೊದಲು ನೋಡಿಕೊಳ್ಳಬೇಕು. ಕೇವಲ ವಿಧಾನ ಸಭೆಯಲ್ಲಿ ಈ ವಿಷಯ ಬಂತು ಎನ್ನುವ ಕಾರಣದಿಂದಾಗಿ ಹರಿಜನ—ಗಿರಿಜನರ ಹಿತಾಸಕ್ತಿಯುಳ್ಳ ಸಂಘ ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರದ ಧೋರಣೆಯಂತೆ ಕೊಟ್ಟ ಕಂಟ್ರಾಕ್ಟನ್ನು ರದ್ದುಗೊಳಿಸುವ ಒಂದು ಕ್ರಮವನ್ನು ಕೈಗೊಳ್ಳಬಾರದು ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.— ಈ ಹರಿಜನ—ಗಿರಿಜನರ ಹೆಸರಿನಲ್ಲಿ ಪ್ರಾರಂಭವಾಗತಕ್ಕಂಥ ಸಹಕಾರ ಸಂಘಗಳಿಂದ ಅವರಿಗೆ ಹೆಚ್ಚು ಅನುಕೂಲವಾಗದೆ ಬೇರೆಯವರಿಗೆ ಅನುಕೂಲವಾಗುತ್ತಿದೆ ಎನ್ನತಕ್ಕಂಥಾದ್ದು ನಿರ್ವಿವಾದವಾಗಿರತಕ್ಕಂಥ ಮಾತು. ಸಾರ್ವಜನಿಕ ಕ್ಷೇತ್ರದಲ್ಲಿ ಈ ರೀತಿ ಆಗುತ್ತಾ ಇರತಕ್ಕಂಥಾದ್ದನ್ನು ನಾವು ನೋಡುತ್ತಾ ಇದ್ದೇವೆ. ಇದರಲ್ಲಿ ಇವರು ಹೆಚ್ಚು ಜನ ಸದಸ್ಯರಾಗಿದ್ದು ಅವರಿಗೆ ಇದರ ಲಾಭ ಹೋಗತಕ್ಕ ಪರಿಸ್ಥಿತಿ ಇದ್ದರೆ ಇದನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಅಭ್ಯಂತರವಿಲ್ಲ. ಅದಲ್ಲದೆ ಕೆಲವೇ ಜನರ ಕೈಯಲ್ಲಿದ್ದರೆ ಆರಣ್ಯ ಇಲಾಖೆ ಪುನರ್ಪರಿಶೀಲನೆ ಮಾಡಬೇಕಾಗುತ್ತದೆ. ಈ ಕೇಸ್ ಏನು ಇದೆ ಅದನ್ನು ನಾನು ನೋಡುತ್ತೇನೆ.

ಸರ್ಕಾರಿ ಮುದ್ರಣಾಲಯದಲ್ಲಿ ಮುದ್ರಿಸಲಾದ ಡೈರಿ ಮತ್ತು ಕ್ಯಾಲೆಂಡರುಗಳ ಬಗ್ಗೆ

೧೧೮. ಶ್ರೀಮತಿ ಸರೋಜಾ ವಸಂತ್ (ವೀರಾಜ ಪೇಟೆ).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರಿ ಮುದ್ರಣಾಲಯದಲ್ಲಿ ೧೯೯೦ನೇ ಇಸವಿಯ ಮುದ್ರಿಸಲಾದ ಕ್ಯಾಲೆಂಡರ್ ಡೈರಿಗಳು ಹಾಗೂ ಎಂಗೇಜ್‌ಮೆಂಟ್ ಡೈರಿಗಳ ಸಂಖ್ಯೆ ಎಷ್ಟು ?

ಆ) ಇವುಗಳನ್ನು ಯಾವ ಆಧಾರದ ಮೇಲೆ ಹಂಚಲಾಗಿದೆ ಹಾಗೂ ಯಾವ ಯಾವ ಇಲಾಖೆಗೆ ಎಷ್ಟೆಷ್ಟು ನೀಡಲಾಗಿದೆ ?

ಇ) ಫೆಬ್ರುವರಿ ತಿಂಗಳು ಮುಗಿದಿದ್ದರೂ ಸಹ ಇನ್ನೂ ಅನೇಕ ಇಲಾಖೆಗಳಿಗೆ ಕ್ಯಾಲೆಂಡರ್‌ಗಳನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಮುಂಬರುವ ವರ್ಷಗಳಲ್ಲಿ ಅನಗತ್ಯ ವಿಳಂಬವಾಗುವುದನ್ನು ತಪ್ಪಿಗಟ್ಟಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ೧) ಕ್ಯಾಲೆಂಡರ್ ೪೧,೦೦೦

೨) ಡೈರಿಗಳು ೪೯,೦೦೦

೩) ಎಂಗೇಜ್‌ಮೆಂಟ್ ಡೈರಿಗಳು ೩,೪೦೦